ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ ಮಾನವಿ

**ಸಿಸಿ ನಂ. 266/2023**

ಪಿರ್ಯಾದಿದಾರರು : ಪೋಲಿಸ್ ಸಿರವಾರ

ವಿರುದ್ದ

ಆರೋಪಿ ನಂ. **1)** ಯಂಕಪ್ಪ ತಂದೆ ಕರಿಲಿಂಗಪ್ಪ,
**2)** ಕರಿಲಿಂಗಪ್ಪ ತಂದೆ ಹನುಮಂತ,
ಇಬ್ಬರು ಮರಾಠ ನಿವಾಸಿಗಳು.

ದೋಷಾರೋಪಣೆ

ನಾನು ಶಿವರಾಜ. ವಿ. ಸಿದ್ದೇಶ್ವರ ಬಿ.ಎಸ್ಸಿ, ಬಿ.ಎಡ್., ಎಲ್.ಎಲ್.ಬಿ. ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಮಾನವಿ , ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಮಾಡುವುದೇನೆಂದರೆ:-

ದಿ: 10-05-2020 ರಂದು ಸಿರವಾರ ತಾಲೂಕಿನ ಮರಾಠ ಗ್ರಾಮದ ಚಾಸಾ-7 ರವರ ಮನೆಯ ಮುಂದೆ 1 ನೇ ಆರೋಪಿತನಾದ ನೀನು ಕಟ್ಟಿಗೆಯಿಂದ ಒಂದು ಸಣ್ಣ ಮಗುವಿಗೆ ಹೊಡೆದಿದ್ದು ಆ ಕಾರಣದಿಂದ ಚಾಸಾ-4 ರವರು ಸರಿಯಾಗಿ ವರ್ತನೆ ಮಾಡು ಎಂದು 1 ನೇ ಆರೋಪಿಗೆ ಬುದ್ದಿ ಹೇಳಿದಾಗ ಆರೋಪಿತರಾದ ನೀವು ಚಾಸಾ-1 ಮತ್ತು 4 ರವರ ಜೊತೆ ಜಗಳ ತೆಗೆದು ಅವರನ್ನು ಅಕ್ರಮವಾಗಿ ತಡೆದು ನಿಲ್ಲಿಸಿದ್ದು ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ. **341** ಸಹಕಲಂ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ದೋಷಾರೋಪಣೆಯನ್ನು ಮಾಡಲಾಗಿದೆ.

ಮೇಲೆ ಹೇಳಿದ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು,ಚಾಸಾ-**1** ಮತ್ತು **4** ರವರಿಗೆ ಕೈಯಿಂದ ಹೊಡೆದಿದ್ದು ಆ ಮೂಲಕ ಆರೋಪಿತರಾದ ನೀವು,

ಭಾರತೀಯ ದಂಡ ಸಂಹಿತೆಯ ಕಲಂ**. 323** ಸಹಕಲಂ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ದೋಷಾರೋಪಣೆಯನ್ನು ಮಾಡಲಾಗಿದೆ**.**

ಮೇಲೆ ಹೇಳಿದ ದಿನಾಂಕ**,** ವೇಳೆ ಹಾಗೂ ಸ್ಥಳದಲ್ಲಿ **1** ನೇ ಆರೋಪಿತನಾದ ನೀನು ಒಂದು ಕಟ್ಟಿಗೆಯಿಂದ ಚಾಸಾ**-1** ಮತ್ತು **4** ರವರಿಗೆ ಹೊಡೆದು ರಕ್ತಗಾಯ ಮಾಡಿದ್ದು ಆ ಮೂಲಕ ಆರೋಪಿತರಾದ ನೀವು**,** ಭಾರತೀಯ ದಂಡ ಸಂಹಿತೆಯ ಕಲಂ**. 324** ಸಹಕಲಂ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ದೋಷಾರೋಪಣೆಯನ್ನು ಮಾಡಲಾಗಿದೆ**.**

ಮೇಲೆ ಹೇಳಿದ ದಿನಾಂಕ**,** ವೇಳೆ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ**- 1** ಮತ್ತು **4** ರವರಿಗೆ ಸೂಳೇ ಮಕ್ಕಳೆ ಎಂದು ಅವಾಚ್ಯ ಶಬ್ದದಿಂದ ಬೈದು ಮತ್ತು ಅವರ ಶಾಂತತೆಗೆ ಭಂಗವನ್ನುಂಟು ಮಾಡಿದ್ದು**,** ಆ ಮೂಲಕ**,** ಭಾರತೀಯ ದಂಡ ಸಂಹಿತೆಯ ಕಲಂ**. 504** ಸಹಕಲಂ **34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ದೋಷಾರೋಪಣೆಯನ್ನು ಮಾಡಲಾಗಿದೆ**.**

ಮೇಲೆ ಹೇಳಿದ ದಿನಾಂಕ**,** ವೇಳೆ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ**- 1** ಮತ್ತು **4** ರವರಿಗೆ ಜೀವಬೆದರಿಕೆ ಹಾಕಿದ್ದು**,** ಆ ಮೂಲಕ**,** ಭಾರತೀಯ ದಂಡ ಸಂಹಿತೆಯ ಕಲಂ**. 506** ಸಹಕಲಂ **34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ದೋಷಾರೋಪಣೆಯನ್ನು ಮಾಡಲಾಗಿದೆ**.**

(ಈ ಮೂಲಕ ಮೇಲೆ ಹೇಳಿದ ಅಪರಾಧಗಳ ವಿಚಾರಣೆಗೆ ಗುರಿಯಾಗತಕ್ಕದೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

ಹಿರಿಯ ಸಿವಿಲ್ ಮತ್ತು ಪ್ರ.ದ. ಗಳು ಮಾನವಿ.

ದಿನಾಂಕ :-26-03-2026

## **1** ನೇ ಆರೋಪಿಯ ಉತ್ತರ

ಪ್ರಶ್ನೆ 1) ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ ?

ಉತ್ತರ:- ತಿಳಿಯಿತು.

ಪ್ರಶ್ನೆ:- 2) ಆರೋಪಣೆಗಳನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕಾ ?

ಉತ್ತರ:- ವಿಚಾರಣೆ ಆಗಬೇಕು.

(ಈ ಮೇಲಿನಂತೆ ದೋಷಾರೋಪಣೆಗಳನ್ನು ಓದಿ ಹೇಳಿ ಆರೋಪಿಗಳು ನೀಡಿದ ಉತ್ತರಗಳನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಿಸಲಾಗಿರುತ್ತದೆ.)

ದಿಃ 26-03-2026.

ಹಿರಿಯ ಸಿವಿಲ್ ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಗಳು
ಮಾನವಿ.

## **2** ನೇ ಆರೋಪಿಯ ಉತ್ತರ

ಪ್ರಶ್ನೆ 1) ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ ?

ಉತ್ತರ:- ತಿಳಿಯಿತು.

ಪ್ರಶ್ನೆ:- 2) ಆರೋಪಣೆಗಳನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕಾ ?

ಉತ್ತರ:- ವಿಚಾರಣೆ ಆಗಬೇಕು.

(ಈ ಮೇಲಿನಂತೆ ದೋಷಾರೋಪಣೆಗಳನ್ನು ಓದಿ ಹೇಳಿ ಆರೋಪಿಗಳು ನೀಡಿದ ಉತ್ತರಗಳನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಿಸಲಾಗಿರುತ್ತದೆ.)

ದಿಃ 26-03-2026.

ಹಿರಿಯ ಸಿವಿಲ್ ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಗಳು
ಮಾನವಿ.